## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## MVC No.1359/2022

R.W-2

**ಸಾಕ್ಷಿದಾರರ ಹೆಸರು** : ಡಿ. ಮೋಹನಕುಮಾರ
**ತಂದೆಯ ಹೆಸರು** : ದೇವಲ ನಾಯಕ್
**ವಯಸ್ಸು** : 43 ವರ್ಷ
**ಉದ್ಯೊಗ** : ಎಫ್.ಡಿ.ಎ, ಆರ್.ಟಿ.ಓ ಕಚೇರಿ, ಶಿವಮೊಗ್ಗ
**ವಾಸ** : ಶಿವಮೊಗ್ಗ

**ದಿನಾಂಕಃ 06-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : 2 ನೇ ಎದುರುದಾರರ ಪರ ವಕೀಲರಿಂದ**

ನಾನು ಕಳೆದ 6 ವರ್ಷಗಳಿಂದ ಆರ್.ಟಿ.ಓ ಕಚೇರಿ ಶಿವಮೊಗ್ಗದಲ್ಲಿ ಎಫ್.ಡಿ.ಎ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ವಾಹನ ಸಂಖ್ಯೆ ಕೆಎ-14-ಬಿ-0356 ನೇದ್ದರ ಬಿ ಎಕ್ಸ್‌ಟ್ರ್ಯಾಕ್ಟ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-3 ಎಂದು ಗುರುತಿಸಲಾಯಿತು. ವಾಹನದ ಫಿಟ್ನೆಸ್ ಕುರಿತು ಇರುವ ದಾಖಲೆಯನ್ನು ನಿಆರ್-4 ಎಂದು ಗುರುತಿಸಲಾಯಿತು. ಚಾಲಕನ ಚಾಲನಾ ಪ್ರಮಾಣ ಪತ್ರದ ಕುರಿತು ದಾಖಲೆಯನ್ನು ನಿಆರ್-5 ಎಂದು ಗುರುತಿಸಲಾಯಿತು. ಅಪಘಾತಕ್ಕೊಳಗಾದ ವಾಹನ ಅದು ಭಾರಿ ಸರಕು ವಾಹನ. ಚಾಲಕನಿಗೆ ದಿನಾಂಕ 30-10-2021 ರಂದು ಚಾಲನಾ ಪ್ರಮಾಣ ಪತ್ರ ಅಸ್ತಿತ್ವದಲ್ಲಿ ಇದ್ದಿರಲಿಲ್ಲ ಎಂದರೆ ನಿಜ. ದಿನಾಂಕ 19-10-2021 ರಂದು ಆತನ ಚಾಲನಾ ಪ್ರಮಾಣ ಪತ್ರ ಅವಧಿ ಮುಗಿದಿದ್ದು ಇರುತ್ತದೆ. ಅದು ಕೇವಲ ಸಾರಿಗೆ ವರ್ಗಾವಣೆಗೆ ಸಂಬಂಧಿಸಿದಂತೆ ಮಾತ್ರ ಚಾಲ್ತಿಯಲ್ಲಿ ಇರುತ್ತದೆ. ಅದನ್ನು ದಿನಾಂಕ 16-08-2023 ರಂದು ನವೀಕರಣಗೊಳಿಸಲಾಗಿದೆ. ಅಪಿಪಘಾತದದಿ ದಿನ ಅಂದರೆ ದಿನಾಂಕ 30-10-2021 ರಂದು ಆತನಿಗೆ ಭಾರೀ ಸರಕು ವಾಹನ ಚಲಾಯಿಸಲು ಚಾಲನಾ ಪ್ರಮಾ ಪತ್ರ ಅಸ್ತಿತ್ವದಲ್ಲಿ ಇದ್ದಿರಲಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ನಿಆರ್-3 ದಾಖಲೆ ಪ್ರಕಾರ ಅದರ ಅನ್ ಲ್ಯಾಡೆನ್ ತೂಕ 6020 ಕೆಜಿ. ಸದ್ರಿ ಆತನಿಗೆ ಎಲ್ಎಂವಿ ವಾಹನ ಇದ್ದರೆ ಸಾಕು ಎಂದರೆ ವಾಹನದಲ್ಲಿ ಏನಾದರೂ ವಸ್ತುಗಳು ಇದ್ದರೆಅದರ ತೂಕ ಜಾಸ್ತಿಯಾಗುತ್ತದೆ ಕಾರಣ ಒಟ್ಟು ತೂಕ 7500 ಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ಎಲ್ಎಂವಿ ಚಾಲನಾ ಪ್ರಮಾಣ ಪತ್ರ ನಡೆಯುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕ 30-10-2021 ರಂದು ಸದ್ರಿ ಚಾಲಕನಿಗೆ ಚಾಲನಾ ಪ್ರಮಾಣ ಪತ್ರ ಇದ್ದಿರಲಿಲ್ಲ ಸದ್ರಿ ನವೀಕರಣಗೊಳಿಸಲು ವಿನಾಯಿತಿ ದಿನಾಂಕ 30 ದಿನ ಇರುತ್ತದೆ. ಸದ್ರಿ ಚಾಲನಾ ಪ್ರಮಾಣ ಪತ್ರ ನವೀಕರಿಸಲು ಆತ ಸಶಕ್ತನಿದ್ದರೆ ಮಾತ್ರ ನವೀಕರಣ ಮಾಡಲಾಗುತ್ತದೆ ಎಂದರೆ ನಿಜ. ಅದೇ ರೀತಿ ಆತನಿಗೆ ಎಲ್ಎಂವಿ ಚಾಲನಾ ಪ್ರಮಾಣ ಪತ್ರ 2033 ರವರೆಗೆ ಚಾಲ್ತಿಯಲ್ಲಿದೆ. ಸದ್ರಿ ಚಾಲಕನಿಗೆ ಭಾರೀ ಸರಕು ವಾಹನ ಚಾಲನೆ ಮಾಡಲು ಬರುವುದಿಲ್ಲಎಂದು ಹೇಳು ಸಾಧ್ಯವಿಲ್ಲ ಎಂದರೆ ನಿಜ.

**ಮರು ವಿಚಾರಣೆಃ** **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ರಾಣೇಬೆನ್ನೂರು.**